725439/2024

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/32/ಸಿಡಿಸಿ(2)/2024(C-1415618)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:16/12/2024.

**: ಜ್ಞಾಪನ :**

ವಿಷಯ: 2024-25 ನೇ ಸಾಲಿಗೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ ಉನ್ನತ ವ್ಯಾಸಂಗಕ್ಕೆಪ್ರಸ್ತಾವನೆ ಸಲ್ಲಿಸುವ ಕುರಿತು.

ಉಲ್ಲೇಖ:
1. ಈ ಕಛೇರಿ ನಿರಾಕ್ಷೇಪಣಾ ಪತ್ರ ಸಂಖ್ಯೆ: ಡಿಟಿಇ 32 ಸಿಡಿಸಿ(2) 2024 (C-14156182) ದಿ13-09-2024.
2. ಈ ಕಛೇರಿ ಜ್ಞಾಪನ ಸಮ ಪತ್ರ ದಿನಾಂಕ:11-11-2024 & 30-11-2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರಲ್ಲಿ, 2024-25ನೇ ಸಾಲಿಗೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ ಉನ್ನತ ವ್ಯಾಸಂಗ ಮಾಡುವ ಸಂಬಂಧ ಅರ್ಜಿ ಸಲ್ಲಿಸಲು / ಹಕ್ಕಿನಲ್ಲಿರುವ ರಜೆಗಳನ್ನು ಉಪಯೋಗಿಸಿಕೊಂಡು ಪರೀಕ್ಷೆ ಬರೆಯಲು/ ಸಂದರ್ಶನಕ್ಕೆ ಹಾಜರಾಗಲು ಮಾತ್ರ ಷರತ್ತುಗಳಿಗೊಳಪಟ್ಟು ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇಲ್ಲವೆಂದು ನಿರಾಕ್ಷೇಪಣಾಪತ್ರವನ್ನು ನೀಡಲಾಗಿದೆ.

ಉಲ್ಲೇಖ (2)ರ ಪತ್ರ ದಿ:11-11-2024ರಲ್ಲಿ ಕೆಸಿಎಸ್ ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ1ರ ಉಪನಿಯಮ( 4 ) ಅನುಸಾರ 2024-25ನೇ ಸಾಲಿಗೆ ಪೂರ್ಣಕಾಲಿಕ ಎಂ.ಟೆಕ್‌ಗೆ ಅರ್ಹ ಉಪನ್ಯಾಸಕರುಗಳಿಂದ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿದ್ದು, ಪ್ರಸ್ತಾವನೆ ಸಲ್ಲಿಸದ ಕೆಲವು ಉಪನ್ಯಾಸಕರುಗಳಿಗೆ ದಿ:30-11-2024ರ ಈ ಕಛೇರಿ ಪತ್ರದಲ್ಲಿ ಮತ್ತೊಮ್ಮೆ ದಾಖಲೆಗಳನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ.

ವಿವಿಧ ಕಾರಣಗಳನ್ನು ನೀಡಿ ಕೆಲವು ಉಪನ್ಯಾಸಕರುಗಳು 2024-25ನೇ ಸಾಲಿನಲ್ಲಿ ಎಂ.ಟೆಕ್ ಉನ್ನತ ವ್ಯಾಸಂಗವನ್ನು ಮಾಡುವುದಿಲ್ಲ ಎಂದು ಪ್ರಾಂಶುಪಾಲರ ಮೂಲಕ ತಿಳಿಸಿರುವ ಹಿನ್ನಲೆಯಲ್ಲಿ ಕೆಸಿಎಸ್ ನಿಯಮ 61(3)ರ ಅಪೆಂಡಿಕ್ಸ್-II 'ಎ'ಯ ನಿಯಮ1ರ ಉಪನಿಯಮ(4)ರನ್ವಯ ವಿಭಾಗವಾರು ಶೇ.5%ರಂತೆ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಬಹುದಾದ್ದರಿಂದ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಈ ಸಾಲಿನಲ್ಲಿಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ಕೋಷ್ಟಕದಲ್ಲಿನ ವಿಭಾಗವಾರು ಉಪನ್ಯಾಸಕರುಗಳನ್ನು ಜೇಷ್ಟತೆಯನುಸಾರ ಪರಿಗಣಿಸಿ ಪೂರ್ಣಕಾಲಿಕ ಎಂ.ಟೆಕ್‌ಗೆ ನಿಯೋಜಿಸುವ ಸಂಬಂಧ ಅಗತ್ಯ ದಾಖಲೆಗಳೊಂದಿಗೆ ದಿ:17-12-2024ರಂದೆ ಪ್ರಸ್ತಾವನೆಯನ್ನು ತಪ್ಪದೇ ಸಲ್ಲಿಸುವಂತೆ ಸದರಿ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

2

3439/2024

ಯಾಂತ್ರಿಕ ವಿಭಾಗ.

| ಕ್ರ.ಸಂ | ಉಪನ್ಯಾಸಕರ ಹೆಸರು | ಸಂಸ್ಥೆಯ ಹೆಸರು | ಸೇವೆಗೆ ಸೇರಿದ ದಿನಾಂಕ | ಇಲಾಖಾ ಸಂಯುಕ್ತತಾ ಜೇಷ್ಟತಾ ಪಟ್ಟಿಯನುಸಾರ ಕ್ರ. ಸಂ |
|---|---|---|---|---|
| 1 | ಮಹೇಶ್ | ಸರ್ಕಾರಿ ಪಾಲಿಟೆಕ್ನಿಕ್, ಅಫ್‌ಜಲ್‌ಪುರ | 17-09-2012 | 1503 |
| 2 | ಪಾವನ ಬಿ.ಎಸ್ | ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ | 17-09-2012 | 1509 |

ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ವಿಭಾಗ

| ಕ್ರ.ಸಂ | ಉಪನ್ಯಾಸಕರ ಹೆಸರು | ಸಂಸ್ಥೆಯ ಹೆಸರು | ಸೇವೆಗೆ ಸೇರಿದ ದಿನಾಂಕ | ಇಲಾಖಾ ಸಂಯುಕ್ತತಾ ಜೇಷ್ಟತಾ ಪಟ್ಟಿ ಯನ ುಸಾರ ಕ್ರ. ಸಂ |
|---|---|---|---|---|
| 01 | ಮೋಹನ್.ಎನ್ | ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು | 08-02-2008 | 1353 |

ಸಿವಿಲ್ ವಿಭಾಗ.

| ಕ್ರ.ಸಂ | ಉಪನ್ಯಾಸಕರ ಹೆಸರು | ಸಂಸ್ಥೆಯ ಹೆಸರು | ಸೇವೆಗೆ ಸೇರಿದ ದಿನಾಂಕ | ಇಲಾಖಾ ಸಂಯುಕ್ತತಾ ಜೇಷ್ಟತಾ ಪಟ್ಟಿ ಯನುಸಾರ ಕ್ರ. ಸಂ |
|---|---|---|---|---|
| 01 | ಶ್ರೀಶೈಲ್ ಎಸ್ ಬಸಗೊಂಡ್ | ಸರ್ಕಾರಿ ಪಾಲಿಟೆಕ್ನಿಕ್, ಝುಳಕಿ | 22-09-2012 | 1540 |
| 02 | ಹರೀಶ್‌ಕುಮಾರ್ ಕೆ. ಬಿ | ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು | 08-10-2012 | 1573 |
| 03 | ವೆಂಕಟೇಶ್ ಡಿ ರಾಥೋಡ್ | ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ | 18-09-2012 | 1578 |
| 04 | ಸುಷ್ಮಾ.ಎಸ್ | ಸಿಪಿಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು | 24-09-2012 | 1580 |

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ(1)ರ ಉಪನಿಯಮ(1) ರಿಂದ (10) ರನ್ವಯ ಹಾಗೂ ಅಪೆಂಡಿಕ್ಸ್ II 'ಎ' ಯ ನಿಯಮ-1ರ ನಿಯಮಗಳೊಂದಿಗೆ ಸೇರಿಸಲಾದ (ಎ) ರಿಂದ (ಎಂ) ರವರೆಗಿನ ಉಪಬಂಧಗಳಲ್ಲಿನ ಕಾರ್ಯವಿಧಾನಗಳನ್ನು ಪೂರೈಸುವ ಮತ್ತು ಸರ್ಕಾರದ ಆದೇಶದಲ್ಲಿನ ಷರತ್ತುಗಳಿಗೊಳಪಟ್ಟು ಸರ್ಕಾರಿ ನೌಕರರನ್ನು ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ /

439/2024

ಎಂ.ಇ ಉನ್ನತ ವ್ಯಾಸಂಗಕ್ಕೆ ಈ ಕೆಳಕಂಡ ಅಂಶಗಳನ್ವಯ ಸರ್ಕಾರದ ಹಂತದಲ್ಲಿಯೇ ನಿಯೋಜನೆ ಮಾಡಲಾಗುವುದು.

1. ಎಂ.ಟೆಕ್ ಉನ್ನತ ವ್ಯಾಸಂಗ ಮಾಡಲು ಬಯಸುವ ಉಪನ್ಯಾಸಕರು ಕನಿಷ್ಠ 5 ವರ್ಷಗಳ ನಿರಂತರ / ಸಕ್ರಮ ಸೇವೆಯನ್ನು ಸಲ್ಲಿಸಿರಬೇಕು ಹಾಗೂ 48 ವರ್ಷ ವಯಸ್ಸಿನೊಳಗಿರಬೇಕು.
2. ಎರಡು ವರ್ಷಗಳ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.
3. ಕೆ.ಸಿ.ಎಸ್ ಉಪನಿಯಮ( 7 ) ರನ್ವಯ ಉನ್ನತ ವ್ಯಾಸಂಗಕ್ಕೆ ಒಂದು ಬಾರಿ ಮಾತ್ರ ನಿಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ.
4. ಉಪನಿಯಮ**(4)**ರನ್ವಯ ಉನ್ನತ ವ್ಯಾಸಂಗಕ್ಕಾಗಿ ಉಪನ್ಯಾಸಕರನ್ನು ಸದರಿಯವರ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡ **5** ನ್ನು ಮೀರದಂತೆ ನಿಯೋಜಿಸಲಾಗುವುದು.
5. ಉಪನ್ಯಾಸಕರನ್ನು ಕೆ.ಸಿ.ಎಸ್ ಉಪನಿಯಮ**(5)**ರನ್ವಯ ಇಲಾಖಾ ಅಧಿಸೂಚನೆ ಸಂಖ್ಯೆ:DTE-ADNIOEST(4)/5/2023/908 ದಿ:21-10-2023 ರ ಸಂಯುಕ್ತತಾ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಕ್ರ.ಸಂ. 04 ರನ್ವಯ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲಾಗುವುದು.
6. ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರ ಪ್ರಸ್ತಾವನೆಯನ್ನು ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ, ಸಂಸ್ಥೆಯ ಪ್ರಾಚಾರ್ಯರು ಸಂಸ್ಥೆಯ ಹಂತದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಅರ್ಹರಾಗಿರುವ ಬೋಧಕವರ್ಗದವರ ವಿವರಗಳನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಈ ಕಛೇರಿ ಸುತ್ತೋಲೆ ಸಂ: ಡಿಟಿಇ/16/ಸಿಡಿಸಿ(2)2018-19, ದಿನಾಂಕ: 24/7/2018 (ಅನುಬಂಧ ಲಗತ್ತಿಸಿದೆ) ರಲ್ಲಿ ತಿಳಿಸಿರುವಂತೆ, ಎಲ್ಲಾ ದಾಖಲೆಗಳನ್ನು/ ಮಾಹಿತಿಗಳನ್ನು ದೃಢೀಕರಿಸಿ ಸಲ್ಲಿಸುವುದು.
7. ಉನ್ನತ ವ್ಯಾಸಂಗಕ್ಕೆ ನಿಯೋಜಿಸುವ ಸಕ್ಷಮ ಪ್ರಾಧಿಕಾರ ಸರ್ಕಾರವಾಗಿರುತ್ತದೆ.
8. ಪೂರ್ಣಕಾಲಿಕ ನೆಲೆಯ ಎಂ.ಟೆಕ್ ಉನ್ನತ ವ್ಯಾಸಂಗಕ್ಕೆ ಕ್ರ.ಸಂ:04 ಮತ್ತು 05 ರನ್ವಯ ಆಯ್ಕೆಗೊಂಡ ಬೋಧಕ ವರ್ಗದವರು ಇಲಾಖೆಯ / ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರವೇಶ ಶುಲ್ಕವನ್ನು ಪಾವತಿಸಬೇಕು.

ಜಂಟಿ ನಿರ್ದೇಶಕರು(ಸಿಡಿಸಿ).

ಇವರಿಗೆ:

1. ಕೋಷ್ಟಕದಲ್ಲಿರುವ ಸಂಸ್ಥೆಯ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

ಪ್ರತಿ: ಸಂಬಂಧಪಟ್ಟ ಬೋಧಕವರ್ಗದವರಿಗೆ – ಪ್ರಾಚಾರ್ಯರ ಮುಖಾಂತರ.